ಬಹಳ ಮುಖ್ಯವಾಗಿದೆ. ನೀಲಗಂಗಯ್ಯ ಪೂಜಾರರವರ ಜೊತೆ ಇವರಿಗೆ ನಿಕಟವಾದ ಸಂಪರ್ಕವಿತ್ತು. ನಮ್ಮ ನೀಲಕಂಠ ಅಸೂಟಿಯವರು, ಅವರೆಲ್ಲರೂ ಅವರ ಶಿಷ್ಯರಾಗಿ ಕೆಲಸ ಮಾಡಿದ್ದಾರೆ. ಅದೇ ರೀತಿ ದಿವಂಗತ ಬಸವಂತಪ್ಪ ಬಿ. ಹಿರೇರೆಡ್ಡಿಯವರು ಬಹಳ soft ಆದರೆ ಸಂಘಟನೆಯಲ್ಲಿ ಬಹಳ ಉತ್ತಮವಾಗಿದ್ದರು. ಆ ಭಾಗದ ಅಭಿವೃದ್ಧಿಗಾಗಿ sugar factory ಯನ್ನು ಅವರು ಮಾಡಿದ್ದಾರೆ. ಅದರ ಜೊತೆಗೆ Milk Federation ನಲ್ಲೂ ಕೂಡ ಬಹಳ active ಆಗಿ ಕೆಲಸವನ್ನು ದಿವಂಗತ ಬಸವಂತಪ್ಪ ಬಿ. ಹಿರೇರೆಡ್ಡಿಯವರು ಮಾಡಿರುವುದನ್ನು ಗಮನಿಸುತ್ತಿದ್ದೇವೆ. ಅದೇ ರೀತಿ ಇತರೆ ಎಲ್ಲಾ ಹಿರಿಯರ ಸೇವೆ ಮತ್ತು ಆದರ್ಶಗಳು ನಮಗೆ ಮಾರ್ಗದರ್ಶನವಾಗುತ್ತದೆ. ನಾವು ಅವರು ಹಾಕಿಕೊಟ್ಟಂತಹ ಮಾರ್ಗದಲ್ಲಿ ನಡೆದು ನಿಜವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿ ನಿಮ್ಮ ಸಂತಾಪ ಸೂಚನೆಗೆ ನಾನು ಧ್ವನಿಗೂಡಿಸಿ ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಕೆ.ಹೆಚ್. ರಂಗನಾಥ್, ಶ್ರೀ ವಿ.ಎಸ್. ಕೃಷ್ಣಐಯ್ಯರ್, ಶ್ರೀ ಎಂ. ಚಂದ್ರಶೇಖರ್, ಶ್ರೀ ಮುಂಡ್ಲೂರು ರಾಮಪ್ಪ, ಶ್ರೀ ಆರ್.ಎನ್. ಲಕ್ಷ್ಮೀಪತಿ, ಶ್ರೀ ಎಂ.ವೈ. ಘೋರ್ಪಡೆ, ಶ್ರೀ ನೀಲಗಂಗಯ್ಯ ಪೂಜಾರ, ಶ್ರೀ ಜಿ.ವಿ. ಸಿದ್ದಪ್ಪ, ಶ್ರೀ ಬಸವಂತಪ್ಪ ಬಿ. ಹಿರೇರೆಡ್ಡಿ, ಶ್ರೀ ಕೆ. ಭೀಮಣ್ಣ, ಶ್ರೀ ಎಸ್.ಎಂ. ಸಿದ್ದಯ್ಯ, ಡಾ॥ ಮತ್ತೂರು ಕೃಷ್ಣಮೂರ್ತಿ, ಶ್ರೀ ಜಿ. ನಾರಾಯಣ ಮತ್ತು ಶ್ರೀ ಅರುಣ ನಾರಾಯಣರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ಮಾನ್ಯ ಮುಖ್ಯಮಂತ್ರಿಯವರು ಹಾಗೂ ಇತರ ನೂತನ ಸಚಿವರುಗಳ ಪರಿಚಯ

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ಸದನದ ಕಲಾಪ ಆರಂಭವಾಗವುದಕ್ಕಿಂತ ಮುಂಚಿತವಾಗಿ ಇಲ್ಲಿ ಬಹಳ ಬದಲಾವಣೆಗಳನ್ನು ನಾವು ನೋಡುತ್ತಿದ್ದೇವೆ. ಇವತ್ತು ಇಲ್ಲಿ ಮಾನ್ಯ ಸದಾನಂದಗೌಡರು ಸಂಸತ್ ಸದಸ್ಯರು,

ಮುಖ್ಯಮಂತ್ರಿಗಳ ಕುರ್ಚಿಯಲ್ಲಿ ಕುಳಿತಿದ್ದಾರೆ. ಮಾನ್ಯ ಮುಖ್ಯಮಂತ್ರಿಯಾಗಿದ್ದವರು ಅಲ್ಲಿ ಹಿಂದೆ ಕುಳಿತಿದ್ದಾರೆ. ಬಹಳಷ್ಟು ಬದಲಾವಣೆಗಳನ್ನು ನಾವು ಕಾಣುತ್ತಿದ್ದೇವೆ. ನನಗೆ ಇದು ಏನು ಎಂದು ಅರ್ಥವಾಗಲಿಲ್ಲ. ಇದನ್ನು ಏನು ಎನ್ನುವುದು? ಹೊರಗಡೆ ಏನಾಯಿತು ಎನ್ನುವುದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ, ಟಿ.ವಿ.ಯಲ್ಲಿ ನೋಡಿದ್ದೇವೆ. ಸದನ ಪ್ರಾರಂಭವಾದ ದಿವಸದಲ್ಲಿ ಮಾನ್ಯ ಮುಖ್ಯಮಂತ್ರಿ ಯಾರು? ಏಕೆಂದರೆ, ಅವರು ಇನ್ನೂ ಸಂಸತ್ ಸದಸ್ಯರು. ಮೊನ್ನೆ ನಾನು ಟಿ.ವಿ.ಯಲ್ಲಿ ನೋಡುತ್ತಿದ್ದೆ. ಅರಣ್ಯ ಸಚಿವರ ಛೇಂಬರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಡಿಯೂರಪ್ಪನವರು ಎಂದು ಅವರ ಫೋಟೋ ಇತ್ತು ಎಂದು ಹೇಳಿ ಮಂತ್ರಿಗಳೂ ಸಹ ಅಲ್ಲಿ ಕುಳಿತಿದ್ದನ್ನು ನೋಡಿದೆ. ಇದು ಏನು ಗೊಂದಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ತಾವು ಈ ಸಭೆ ಪ್ರಾರಂಭವಾಗುವಂತಹ ಸಂದರ್ಭದಲ್ಲಿ ಅದು ಒಂದು ಸಂಪ್ರದಾಯವಿದೆ. ಪಾರ್ಲಿಮೆಂಟ್ ಆಗಬಹುದು ಅಥವಾ ವಿಧಾನಸಭೆಯಾಗಬಹುದು. ಅಲ್ಲಿ ಸಭೆಯ ಪ್ರಾರಂಭದ ದಿನದಂದು ಪ್ರಶ್ನೋತ್ತರಗಳಿಗಿಂತ ಮುಂಚಿತವಾಗಿ ಸಭೆಯಲ್ಲಿ ಏನು ಬದಲಾವಣೆಯಾಗಿದೆ ಎನ್ನುವುದನ್ನು introduce ಮಾಡುವುದು ಸಂಪ್ರದಾಯ. ಆ ಸಂಪ್ರದಾಯದಂತೆ ಏಕೆ ತಾವು ಮಾಡಲಿಲ್ಲ ಎನ್ನುವುದು ಪ್ರಶ್ನೆ ನಾನು ನಿಮಗೆ ಪ್ರಶ್ನೆ ಮಾಡುತ್ತಿಲ್ಲ. ಸ್ಪಷ್ಟೀಕರಣ ಕೇಳುತ್ತಿದ್ದೇನೆ. ದಯಮಾಡಿ ಹೇಳಬೇಕು.

ಅಧ್ಯಕ್ಷರು: ಪ್ರಶ್ನೋತ್ತರ ಆದಮೇಲೆ ಮಾಡೋಣ

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಈಗಲೇ ಮಾಡಿ. It is a new Government.

ಶ್ರೀ ಟಿ.ಬಿ. ಜಯಚಂದ್ರ: ಈಗ ನಾನು ಸಂಪ್ರದಾಯವಿಲ್ಲದೇ ಮಾತನಾಡುತ್ತಿಲ್ಲ. ಇಲ್ಲಿ ಇದೆ. ಬೇಕಾದರೆ ನಾನು ಓದಿ ಹೇಳಿ ಎಂದರೆ ಹೇಳುತ್ತೇನೆ.

ಅಧ್ಯಕ್ಷರು: ನಾನು ನೋಡಿದ್ದೇನೆ. ಅವರಿಗೆ ಹೇಳಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ನಮಗೆ ಗೊತ್ತಿಲ್ಲ. ಸ್ವಲ್ಪ ಓದಿ ಸ್ವಾಮಿ.

ಅಧ್ಯಕ್ಷರು: ಅದರಲ್ಲಿ ಕ್ಲಿಯರ್ ಆಗಿ ಇದೆ.

ಶ್ರೀ ಟಿ. ಬಿ. ಜಯಚಂದ್ರ : ಇದರಲ್ಲಿ ಕ್ಲಿಯರ್ ಆಗಿ ಇದೆ. ಸಭೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ತಾವು introduce ಮಾಡಬೇಕು. ಯಾರು ಮುಖ್ಯಮಂತ್ರಿಗಳು, ಮಂತ್ರಿಗಳು ಯಾರು ಎನ್ನುವುದನ್ನು ಪರಿಚಯಿಸುವ ಕೆಲಸವನ್ನು

ಮಾಡದೇ ಇದ್ದರೆ ಅದು ಸಂಪ್ರದಾಯವಾಗುವುದಿಲ್ಲ. ಏಕೆಂದರೆ, ಇಲ್ಲಿ ಬಹಳಷ್ಟು ಗೊಂದಲವಾಗಿದೆ. ಈಗ ಏನಾಗಿದೆ ಎಂದರೆ ಪತ್ರಿಕೆಯಲ್ಲಿ ಬರುತ್ತಿದೆ. ಈ ಮನೆಯ ಸದಸ್ಯರಾದ ಮಾನ್ಯ ಯಡಿಯೂರಪ್ಪನವರು ಹೇಳುತ್ತಾರೆ, ಇನ್ನು ಆರು ತಿಂಗಳಿಗೆ ನಾನೇ ವಾಪಸ್ಸು ಬರುತ್ತೇನೆ ಎನ್ನುವ ಮಾತನ್ನು ಕೂಡ ಹೇಳುತ್ತಾರೆ. ಯಾರನ್ನು ನಂಬಬೇಕು, ಏನು ಮಾಡಬೇಕು? ಮಾನ್ಯ ಮುಖ್ಯಮಂತ್ರಿಗಳು ಯಾರು ಎನ್ನುವುದು ನಮಗೆ ಗೊಂದಲವಾಗಿದೆ. ಮಾನ್ಯ ಮುಖ್ಯಮಂತ್ರಿ ಯಾರು, ಅವರು ಸಂಸತ್ ಸದಸ್ಯರಾಗಿದ್ದರೇ, ಯಾವಾಗ ಈ ಮನೆಯ ಸದಸ್ಯರಾಗುತ್ತಾರೆ ಎನ್ನುವ ಏನಾದರೂ ವಿಚಾರವನ್ನು ತಾವು ಸಭೆಗೆ ಹೇಳಲೇಬೇಕಲ್ಲವೇ?

ಅಧ್ಯಕ್ಷರು: ಆಯಿತು, ಈಗಲೇ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಾಗಿ ಶ್ರೀ ಡಿ.ವಿ. ಸದಾನಂದಗೌಡರು ನಿಯುಕ್ತಿಯಾಗಿದ್ದಾರೆ. ಅವರು ಅವರ ಮಂತ್ರಿಮಂಡಲ ಮತ್ತು ಅವರನ್ನು ಪರಿಚಯಿಸಬೇಕೆಂದು ಹೇಳಿ ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಸದಸ್ಯರಲ್ಲದಿರುವುದರಿಂದ ಮಾನ್ಯ ಸುರೇಶ್ ಕುಮಾರ್‌ರವರು ಈ ಸದನದ ಸಭಾನಾಯಕರಾಗಿ ಇರುತ್ತಾರೆ.

ಶ್ರೀ ಸಿದ್ಧರಾಮಯ್ಯ: ಎಲ್ಲಾ ಪರಿಚಯವಾಯಿತು ಬಿಡಿ ಸ್ವಾಮಿ.

ಅಧ್ಯಕ್ಷರು: ಉಳಿದವರ ಪರಿಚಯವಾಗಬೇಕು.

ಶ್ರೀ ಸಿದ್ಧರಾಮಯ್ಯ: ಯಾರಾದರೂ ಹೊಸ ಮಂತ್ರಿಗಳಿದ್ದರೆ ಪರಿಚಯ ಮಾಡಿಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): ಹಳೆಯ ಮಂತ್ರಿಗಳ ಪರಿಚಯ ನಿಮಗೆಲ್ಲಾ ಇದೆ ಎಂದು ನಾನು ಭಾವಿಸುತ್ತಿದ್ದೇನೆ. ಕಾನೂನಿನ ಚೌಕಟ್ಟಿನಲ್ಲಿ ಮುಖ್ಯಮಂತ್ರಿ ಆರು ತಿಂಗಳೊಳಗೆ ಈ ಸದನದ ಅಥವಾ ಮೇಲ್ಮನೆಯ ಸದಸ್ಯನಾಗಿರಬೇಕು ಎನ್ನುವುದು ಹಿರಿಯ ರಾಜಕಾರಣಿಗಳಾದ ನಿಮಗೆಲ್ಲಾ ಗೊತ್ತಿದೆ ಎಂದು ನಾನು ಭಾವಿಸುತ್ತಿದ್ದೇನೆ. ಪ್ರತ್ಯೇಕವಾಗಿ ನಾನು ಲೋಕಸಭಾ ಸದಸ್ಯರಾಗಿದ್ದರೂ ಕೂಡ ಆರು ತಿಂಗಳ ಒಳಗೆ ನಾನು ಈ ಸದನದ ಸದಸ್ಯತ್ವ ಪಡೆದುಕೊಂಡು ಇಲ್ಲಿ ಇರಬೇಕಾಗಿದೆ. ಆ ಸಂಪ್ರದಾಯವನ್ನು ನಾನು ಪಾಲಿಸುತ್ತೇನೆ ಎಂದು ಹೇಳುವಂತಹ ವಿಶ್ವಾಸ ನನಗಿದೆ. ಆ ರೀತಿಯಲ್ಲಿ ನಾನು ಮುಂದೆ ಹೋಗುತ್ತೇನೆ. ಎರಡನೆಯದಾಗಿ, ಈಗಾಗಲೇ ತಮಗೆ ಗೊತ್ತಿರುವ ರೀತಿಯಲ್ಲಿ ನನ್ನ ಸಂಪುಟದ ಹಳೆಯ ಸದಸ್ಯರ ಪರಿಚಯ ನಿಮಗಿದೆ. ಹೊಸ ಸದಸ್ಯರ ಪರಿಚಯ ಮಾಡುತ್ತೇನೆ. ಹಲವಾರು ಮಂತ್ರಿಗಳು ಮೇಲ್ಮನೆಯಲ್ಲಿ ಕೂಡ ಇದ್ದಾರೆ. ಸನ್ಮಾನ್ಯ

ಯೋಗೇಶ್ವರ್‌ರವರು ಅರಣ್ಯ ಇಲಾಖೆಯ ಸಚಿವರಾಗಿದ್ದಾರೆ. ಸನ್ಮಾನ್ಯ ರಾಜು ಗೌಡರವರು ಸಣ್ಣ ಕೈಗಾರಿಕೆಯ ಸಚಿವರಾಗಿದ್ದಾರೆ ಹಾಗೂ ಸನ್ಮಾನ್ಯ ವರ್ತೂರು ಪ್ರಕಾಶ್‌ರವರು ಟೆಕ್ಸ್‌ಟೈಲ್ಸ್ ಸಚಿವರಾಗಿದ್ದಾರೆ. ಬಾಕಿಯವರೆಲ್ಲಾ ಹಳಬರು, ನಿಮ್ಮ ಜೊತೆಯಲ್ಲಿ ಇವತ್ತು ಕುಳಿತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಹೊಸ ಸಚಿವರು, expansion, ಮತ್ತೊಂದು ಆಗುತ್ತದೋ ಅಥವಾ ಇಲ್ಲವೋ? ಅಥವಾ ಇಲ್ಲಿಗೇ ನಿಂತುಕೊಳ್ಳುತ್ತದೆಯೇ? ಏನಾದರೂ ಬದಲಾವಣೆ ಆಗುತ್ತದೆಯೇ?

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಅವರ ಹೊಸ ಸಹೋದ್ಯೋಗಿಗಳಿಗೆ ಅಭಿನಂದನೆಗಳು. ಆದರೆ ಒಂದು ಅನುಮಾನ ಜನರಲ್ಲಿ ಕಾಡುತ್ತಿದೆ. ಮಾನ್ಯ ಯಡಿಯೂರಪ್ಪನವರ ಮುಖ್ಯಮಂತ್ರಿ ಸ್ಥಾನ ಹೋದ ಮೇಲೆ ಮಾನ್ಯ ಡಿ.ವಿ. ಸದಾನಂದ ಗೌಡರವರು ಮುಖ್ಯಮಂತ್ರಿಗಳಾದರು ಎಂದು ನಾವೆಲ್ಲಾ ಪತ್ರಿಕೆಯಲ್ಲಿ ಓದಿದ್ದೇವೆ. ಈಗ introduce ಮಾಡಿದ್ದೀರಿ. ಅವರು ಪದೇ ಪದೇ ಹೇಳುತ್ತಿದ್ದಾರೆ. ಇನ್ನು ಆರು ತಿಂಗಳಲ್ಲಿ ನಾನು ಮುಖ್ಯಮಂತ್ರಿಯಾಗಿ ವಾಪಸ್ ಬರುತ್ತಿದ್ದೇನೆಂದು ಹೇಳುತ್ತಿದ್ದಾರೆ. ಇವರೂ ಮತ್ತೆ ನಮ್ಮ ನಾಯಕರು ಅವರೇ ಎಂದು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರ ಹತ್ತಿರ ಇದ್ದಂತಹ personal staff ಎಲ್ಲಾ ಇವರ ಹತ್ತಿರವೇ ಬಂದಿದ್ದಾರೆ. ಈಗ ಜನರಿಗೆ ಅನುಮಾನ ಕಾಡುತ್ತಿದೆ. ಈ ಸರ್ಕಾರ ಎಷ್ಟು ದಿನ ಇರುತ್ತದೋ ಎಂದು ಅನುಮಾನ ಇದೆ. ನಮ್ಮದೇನೂ ತಕರಾರು ಇಲ್ಲ. ಅವರಲ್ಲೇ ಗೊಂದಲಗಳು ಇರುವುದು. ನಾವೇನೂ ಹೇಳಿಲ್ಲ, ನಾವು ಅವರಿಗೆ ಅಭಿನಂದನೆಗಳನ್ನು ಈಗ ಹೇಳಿದ್ದೇವೆ ನಮ್ಮದೇನೂ ತಕರಾರು ಇಲ್ಲ. ನಿಮ್ಮಲ್ಲಿ ಜನಗಳು ಏನು ಹೇಳುತ್ತಾರೆ ಎಂದರೆ ಮಾನ್ಯ ಸದಾನಂದ ಗೌಡರವರು ಬಹಳ ದಿನ ಇರುವುದಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಪುನಃ ವಾಪಸ್ ಬರುತ್ತೇವೆಂದು ಹೇಳುತ್ತಾರೆ. ಅದಕ್ಕೆ ಅವರೆಲ್ಲಾ staff ಗಳನ್ನು ಅಲ್ಲೇ ಇಟ್ಟಿದ್ದಾರೆ. ಅವರ ಜೊತೆಯಲ್ಲೇ ಇಟ್ಟು ಬಿಟ್ಟಿದ್ದಾರೆ. ಮತ್ತೆ ಅವರೇ ಹೇಳುವುದು, ಎಲ್ಲಾ staff ಅವರು ಹೇಳಿದ ಹಾಗೆ ಕೇಳುತ್ತಾರೆ. ಪಾಪ ಮಾನ್ಯ ಸದಾನಂದ ಗೌಡರವರನ್ನು ಮುಖ್ಯಮಂತ್ರಿಗಳಾಗಿ ಮಾಡಿ ಬಿಟ್ಟು ಅವರಿಗೇನೂ ಸ್ವಾತಂತ್ರ್ಯ ಕೊಡದಲೇ ಅವರು ಬಹಳ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ ಎಂದು ಜನ ಮಾತನಾಡುತ್ತಿದ್ದಾರೆ. ನಿಮ್ಮ ಕಿವಿಗೂ ಇದು ಬಿದ್ದಿರಬೇಕು.

ಮಂತ್ರಿಗಳೂ ಸಹಿತ ತಮ್ಮ ಮಾತು ಕೇಳುತ್ತಿಲ್ಲವೆಂದು ಹೇಳುತ್ತಿದ್ದಾರೆ, ಎಲ್ಲರೂ ಯಡಿಯೂರಪ್ಪನವರ ಮನೆಗೆ ಹೋಗುತ್ತಿದ್ದಾರೆಂದು ಜನ ಮಾತನಾಡುತ್ತಿದ್ದಾರೆ, ನಾವಲ್ಲಾ ಮಾತನಾಡುತ್ತಿರುವುದು.

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು) :– ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ :– ತಾವು ಕುಳಿತುಕೊಳ್ಳಿ. ನೀವು ಮಧ್ಯದಲ್ಲಿ ಅಡ್ಡ ಬಂದರೆ ಹೇಗೆ ? ಆದ್ದರಿಂದ ಮಾನ್ಯ ಯಡಿಯೂರಪ್ಪನವರು ಹಿಂದುಗಡೆ ಕುಳಿತುಕೊಂಡು ಎಲ್ಲರನ್ನೂ ನಿಯಂತ್ರಣ ಮಾಡುತ್ತಿದ್ದಾರೆಂದು ಅನ್ನಿಸುತ್ತದೆ. ಈಗ ನೀವು ಇಲ್ಲಿ ಹೇಳಬೇಕು, ನಾನು ಸರ್ವ ಸ್ವತಂತ್ರನಾಗಿದ್ದೇನೆ, ಸರ್ಕಾರದ ಮುಖ್ಯಸ್ಥನಾಗಿದ್ದೇನೆ, ನಾನು ಮಾನ್ಯ ಯಡಿಯೂರಪ್ಪನವರ obligation ನಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಬೇಕು. ಜನಗಳಿಗೆ ಗೊತ್ತಾಗಬೇಕು. ಅವರು ಪದೇ ಪದೇ ಹೇಳುತ್ತಾರೆ, ಅವರು ಆ ರೀತಿ ಹೇಳುವುದನ್ನು ಬಿಟ್ಟಿಲ್ಲ. ಆರು ತಿಂಗಳಾದ ಮೇಲೆ ಪುನಃ ಬರುತ್ತೇನೆಂದು ಹೇಳುತ್ತಿದ್ದಾರೆ. ಅವರು ಇತ್ತೀಚೆಗೂ ಹೇಳಿದ್ದಾರೆ, ಬಳ್ಳಾರಿಯಲ್ಲಿ ಸಹ ಈ ರೀತಿ ಹೇಳಿದ್ದಾರೆ. ನೀವು ಸಹ ಬಳ್ಳಾರಿಯಲ್ಲಿ ಅವರೇ ನಮ್ಮ ಲೀಡರ್ ಎಂದು ಹೇಳಿದ್ದೀರಿ, ಏನು ಮಾಡುವುದು ?

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಪ್ರತಿಪಕ್ಷದ ನಾಯಕರಿಗೆ ಇವತ್ತು ಎಂತಲ್ಲ, ಈ ಸರ್ಕಾರ ಬಂದ ಮೇಲೆ ನಿರಂತರವಾಗಿ ಸಂಶಯಗಳು ಕಾಡುತ್ತಲೇ ಇವೆ, ಆ ಸಂಶಯದ ವ್ಯಾಪ್ತಿಯಿಂದ ಅವರು ಹೊರಗೆ ಬರಲೇ ಇಲ್ಲ. ಪ್ರಾರಂಭಿಕ ದಿನದಿಂದ ಇವತ್ತಿನ ದಿನದವರೆಗೆ ಸರ್ಕಾರ ಏನಾಗುತ್ತದೆ ? ಹೇಗಾಗುತ್ತದೆ? ಇರುತ್ತದೋ ಇಲ್ಲವೋ ಎಂದು ಹೇಳುವಂತಹ ಸಂಶಯದಲ್ಲಿ ನೀವು ಇದ್ದೀರಿ, ನಾವು ಮೂರುವರೆ ವರ್ಷ ಕಳೆದಿದ್ದೇವೆ, ಇನ್ನು ಒಂದುವರೆ ವರ್ಷಕ್ಕೆ ನೀವು ಯಾವುದೇ ಸಂಶಯ ಪಡುವುದು ಬೇಡ, ಈ ಕುರ್ಚಿಯಲ್ಲಿ ನಾನು ಸದಾನಂದ ಗೌಡ ಮುಖ್ಯಮಂತ್ರಿಯಾಗಿ ಇರುತ್ತೇನೆ. ಇನ್ನೊಮ್ಮೆ ..

ಶ್ರೀ ಸಿದ್ದರಾಮಯ್ಯ :– ನಿಮ್ಮ ಯಡಿಯೂರಪ್ಪನವರು ಮತ್ತೆ ಆರು ತಿಂಗಳಲ್ಲಿ ಬರುತ್ತಾರೋ ಇಲ್ಲವೋ you must clarify it ಮಾನ್ಯ ಯಡಿಯೂರಪ್ಪನವರು ಆರು ತಿಂಗಳ ನಂತರ ಬರುವುದಿಲ್ಲ, ನಾನೇ ಇರುತ್ತೇನೆ ಎಂದು ಹೇಳಬೇಕು.

ಶ್ರೀ ಡಿ.ವಿ. ಸದಾನಂದ ಗೌಡ :– (ಮುಖ್ಯಮಂತ್ರಿಗಳು) ಒಂದು ನಿಮಿಷ ದಯವಿಟ್ಟು

ಕುಳಿತುಕೊಳ್ಳಿ, ಒಂದಷ್ಟು ನಮ್ಮ ಕಲಾಪಗಳನ್ನು ಸೌಜನ್ಯದಿಂದ ನಡೆಸಿಕೊಂಡು ಹೋಗುವುದು ಅತ್ಯಂತ ಸೂಕ್ತ ಎಂದು ನಾನು ಭಾವಿಸುತ್ತಿದ್ದೇನೆ. ಅವರು ಹೇಳಿದ್ದಕ್ಕೆಲ್ಲಾ ನಾನು ಕುಳಿತುಕೊಂಡೆ, ನೀವು ಕೇಳಿದ ಹಾಗೆ ಮಾಡಿದ್ದೇನೆ, ನಾನು ಹೇಳುವಂತಹದು ಈ ಸಂಶಯ ಎಂದು ಹೇಳುವಂತಹ ಪಿಶಾಚಿ ಇದೆಯಲ್ಲಾ, ಅದು ಭಾರಿ ಕಷ್ಟ, ನೀವು ಸಂಶಯವನ್ನು ಬಿಟ್ಟರೆ ಪ್ರಾಯಶಃ ಇನ್ನಷ್ಟು ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಲಿಕ್ಕೆ ನಮಗೆ ನಿಮಗೆ ಸಾಧ್ಯವಾಗುತ್ತದೆ ಎಂದು ಹೇಳುವಂತಹ ನನ್ನ ಭಾವನೆ ಇದೆ. ಯಡಿಯೂರಪ್ಪನವರು ನಮ್ಮ ನಾಯಕರೆಂದು ನಾನು ಆವತ್ತು ಹೇಳಿದ್ದೇನೆ, ಇವತ್ತು ಈ ಸದನದಲ್ಲೂ ಹೇಳುತ್ತೇನೆ, ನಮ್ಮ ಪಕ್ಷವನ್ನು ಕಟ್ಟಿದವರು ಅವರು, ಪಕ್ಷವನ್ನು ಕಟ್ಟಲಿಕ್ಕೆ ಸಾಕಷ್ಟು ಕೆಲಸಗಳನ್ನು ಅವರು ಮಾಡಿದ್ದಾರೆ, ನಿಕಟಪೂರ್ವ ಮುಖ್ಯಮಂತ್ರಿಯಾಗಿ ಅವರು ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡಿದವರು, ಅವರನ್ನು ನಾವು ನಾಯಕರಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ. ನೀವು ಕೂಡ ನಿಮ್ಮ ಪಕ್ಷದಲ್ಲಿ ಸಾಕಷ್ಟು ನಾಯಕರನ್ನು ಇಟ್ಟುಕೊಂಡಿದ್ದೀರಿ, ಆದ್ದರಿಂದ ಪ್ರಧಾನ ಮಂತ್ರಿಯಾಗಿದ್ದವರು ಕೂಡ ನಿಮ್ಮ ನಾಯಕರು, ನಿಮ್ಮ ಪಕ್ಷವನ್ನು control ಮಾಡುವಂತಹವರೂ ಕೂಡ ನಿಮ್ಮ ನಾಯಕರು ಎಂದು ನೀವೆಲ್ಲಾ ಒಪ್ಪಿಕೊಂಡಿದ್ದೀರಿ. ಆದ ಕಾರಣ ನಾವು ಇದನ್ನು ಅಲ್ಲ ಎಂದು ಹೇಳುವುದಿಲ್ಲ. ಆದರೆ ಎಲ್ಲೋ ಒಂದು ಕಡೆ ಈ ಸಣ್ಣ ಹಾರಿಕೆ ಸುದ್ದಿಗಳನ್ನು ಹರಡುವಂತಹದು, ಈ ಹಾರಿಕೆ ಸುದ್ದಿಗಳನ್ನೇ ಒಂದು confusion create ಮಾಡುವಂತಹದು ಸಮಾಜದಲ್ಲಿದೆ, ಇದು ಯಾವುದೋ ವಾಸ್ತವಿಕ ಸಂಗತಿಗಳಿಗೆ ಅಷ್ಟು ಒಳ್ಳೆಯ ಸಂಪ್ರದಾಯಗಳು ಆಗುವುದಿಲ್ಲ ಎನ್ನುವುದು ನನ್ನ ವಿನಂತಿ ಇದೆ. ನಾನು ಇವತ್ತು ಮುಖ್ಯಮಂತ್ರಿಯಾಗಿದ್ದೇನೆ, ನಾಳೆ, ನಾಡಿದ್ದು, ಮತ್ತೊಂದು ದಿವಸ ಏನು ಎಂದು ಹೇಳುವಂತಹ ಪ್ರಶ್ನೆಗಳನ್ನು ನೀವು ಕೇಳಿದರೆ ಆಯಾಯ ದಿನಗಳಿಗೆ ನಾನು ಉತ್ತರ ಕೊಡಲಿಕ್ಕೆ ತಯಾರಿದ್ದೇನೆ. ಅದಕ್ಕೆ ನೀವು ಏನೂ ಹಿಂದೆ ಮುಂದೆ ನೋಡುವುದು ಬೇಡ. ಇವತ್ತಿನ ದಿನದಲ್ಲಿ ಭಾರತೀಯ ಜನತಾ ಪಾರ್ಟಿಯ ಶಾಸಕಾಂಗ ಪಕ್ಷದ ಸಭೆ ನನ್ನನ್ನು ನಾಯಕನನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದೆ. ನಾನು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದೇನೆ, ಇವತ್ತು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿದ್ದೇನೆ, ಮುಖ್ಯಮಂತ್ರಿ ಸ್ಥಾನದಿಂದ ರಾಜ್ಯದ ಆಡಳಿತವನ್ನು ಇವತ್ತು ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತೇನೆ. ಈ ಸಂಶಯಗಳನ್ನು ಇವತ್ತು ಬಿಟ್ಟು ಬಿಡಿ, ಮಾನ್ಯ ಯಡಿಯೂರಪ್ಪನವರು ಈ ಸಭೆಯ ಒಬ್ಬ ಸದಸ್ಯರು, ಅವರಿಗೆ ನಮ್ಮ speaker ಅವರು ಒಂದು ಸ್ಥಾನವನ್ನು ಕೊಟ್ಟಿದ್ದಾರೆ. ಅವರು ಅಲ್ಲಿ ಕುಳಿತುಕೊಂಡಿದ್ದಾರೆ. ಆದಕಾರಣ ಹಿಂದೆ ಕುಳಿತಿದ್ದಾರೋ, ಮುಂದೆ

ಕುಳಿತಿದ್ದಾರೋ ಎಂಬ ಸಂಶಯ ನಿಮಗೆ ಬೇಡ. ರಾಜ್ಯದ ಆಡಳಿತದ ಹಿತದೃಷ್ಟಿಯಿಂದ, ರಾಜ್ಯದ ಆಡಳಿತವನ್ನು ಮಾಡುವಂತಹ ಸಂದರ್ಭಗಳಲ್ಲಿ ಬರುವಂತಹ ಯಾವುದೇ ವಿಚಾರಗಳನ್ನು ಹೇಳಿ, ನಾನು ಈಗಾಗಲೇ ಸ್ಪಷ್ಟೀಕರಣವನ್ನು ಮಾಡಿದ್ದೇನೆ, ಮತ್ತೆ ಸದನದಿಂದಲೂ ಸ್ಪಷ್ಟೀಕರಣ ಮಾಡಬೇಕೆಂದು ಕೇಳಿದ್ದಕ್ಕೆ ಮಾಡುತ್ತೇನೆಯೆ ಹೊರತು ಇಡೀ ರಾಜ್ಯಕ್ಕೆ ನಾನು ಸ್ಪಷ್ಟೀಕರಣ ಮಾಡಿದ್ದೇನೆ, ನಿನ್ನೆಗೆ ನಾನು ನಾಲ್ಕು ತಿಂಗಳು ಆಡಳಿತವನ್ನು ಮಾಡಿದ್ದೇನೆ, ಯಾವುದೇ ಸಂದರ್ಭದಲ್ಲಿ ಕೂಡ ಇಂತಹ ಗೊಂದಲಗಳಿಗೆ ಎಲ್ಲಿಯೂ ಅವಕಾಶವನ್ನು ಮಾಡಿಕೊಡಲಿಲ್ಲ, ಗೊಂದಲ ಇರುವಂತಹದು ರಾಜ್ಯದ ಜನತೆಗೆ ಅಲ್ಲ, ಗೊಂದಲ ಇರುವಂತಹದು ನಿಮಗೆ ಮತ್ತು ನಿಮ್ಮ ತಂಡಕ್ಕೆ ಮಾತ್ರ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು :– ಈ ವಿಷಯವನ್ನು ಮುಕ್ತಾಯ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಸದಾನಂದ ಗೌಡರು ಮುಖ್ಯಮಂತ್ರಿಗಳು ಎಂದು ಹೇಳಿದರು, ಅದನ್ನು ನಾವು ನಂಬಿದ್ದೇವೆ. ಅದರಲ್ಲಿ ಏನೂ ಇಲ್ಲ, ನಮ್ಮ ತಾಲ್ಲೂಕು ಆಫೀಸ್ ಮುಂದೆ board ಗಳು ಇವೆ. ನೋಡಿ ಬನ್ನಿ. ಇವತ್ತೂ ಯಡಿಯೂರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಎಂದು ಇದೆ. ನೀವು ಮುಖ್ಯಮಂತ್ರಿಗಳಾಗಿ ನಾಲ್ಕು ತಿಂಗಳಾದರೂ ಕೂಡ ಇನ್ನೂವರೆಗೆ board ಗಳನ್ನು change ಮಾಡಿಲ್ಲ ಎಂದರೆ ಎಲ್ಲೋ ಒಂದು ಕಡೆ ಯಡಿಯೂರಪ್ಪನವರು ವಾಪಸ್ ಬರುತ್ತಾರೆ ಎಂದು ಹೇಳಿಕೊಂಡು ಬಂದ ಮೇಲೆ ಅದು ಪುಷ್ಟೀಕರಣ ಆಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ :– ಎಲ್ಲಾ ಕಡೆ board change ಆಗಿದೆ. ಸುಮ್ಮನೇ ಯಡಿಯೂರಪ್ಪನವರ ಮೇಲೆ ಗೂಬೆ ಕೂರಿಸುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಎಲ್ಲರೂ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ಎಲ್ಲಾ ಕಡೆ ಬದಲಾವಣೆ ಮಾಡಲಾಗಿದೆ.

(ಗೊಂದಲ)

ಅಧ್ಯಕ್ಷರು :– ಈ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಿತ್ತು. ಮಾನ್ಯ ಸದಾನಂದ ಗೌಡರವರೇ ಮುಖ್ಯಮಂತ್ರಿಗಳಾಗಿ ಇರಬೇಕು ಎಂದು ನಮ್ಮ ಆಸೆಯೂ ಇದೆ. ಜೊತೆಯಲ್ಲಿ ಅನುಮಾನವೂ ಇದೆ. ಈಗ ನೀವು ಇಲ್ಲಿಗೆ ಪಾರ್ಲಿಮೆಂಟಿನಿಂದ ಬಂದಿರುವುದರಿಂದ ಅನುಭವದ ಲಾಭ ನಮಗಾಗಬೇಕು ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ :– ಇಡೀ ಸದನದ ಅವಧಿ ಪೂರ್ತಿ ಮುಖ್ಯಮಂತ್ರಿ ಆಗಿ ಇರುತ್ತೀರಾ ? ಹಳೆ ನಾಯಕರು ಬರುವುದಿಲ್ಲ ಎಂದು ನೀವೇ ಹೇಳಿ.

(ಗೊಂದಲ)

ಅಧ್ಯಕ್ಷರು :– ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗಲೂ ನೀವು ಮಾತನಾಡುತ್ತೀರಿ. ಮಾನ್ಯ ಮುಖ್ಯಮಂತ್ರಿಗಳು ಎದ್ದಾಗಲೂ ಮಾತನಾಡುತ್ತೀರಿ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಹಿಂದಿನ ಮುಖ್ಯಮಂತ್ರಿಗಳು ಎಂದರೆ ಎಲ್ಲರೂ ಬರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಲಿ ಸಾಯಂಕಾಲದ ಒಳಗೆ ಹಿಂದಿನ ಫೋಟೋಗಳನ್ನು ಎಲ್ಲಾ ತೆಗೆದು ಸನ್ಮಾನ್ಯ ಸದಾನಂದ ಗೌಡರ ಫೋಟೋ ಹಾಕಬೇಕು, ಅದು ಹಕ್ಕು.

ಅಧ್ಯಕ್ಷರು :– ಆಗಿದೆಯಲ್ಲಾ ? ಹೇಳಿದ್ದಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಆಗಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ಈಗ ಹೇಳಿದರಲ್ಲ ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ಕಾರ್ಯದರ್ಶಿಯವರ ಕಛೇರಿಯಲ್ಲಿ ಮಾನ್ಯ ಯಡಿಯೂರಪ್ಪನವರ ಫೋಟೋ ಇದೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಹೌದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– Secretary Officeನಲ್ಲಿ ಯಡಿಯೂರಪ್ಪನವರ ಫೋಟೋ ಇದೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಸಾಯಂಕಾಲದೊಳಗೆ ಹಿಂದಿನ ಫೋಟೋಗಳನ್ನು ತೆಗೆದು ಸನ್ಮಾನ್ಯ ಸದಾನಂದ ಗೌಡರ ಫೋಟೋ ಹಾಕಬೇಕೆಂದು ಇವತ್ತು ಆದೇಶವನ್ನು ಕೊಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ :– ಹಳ್ಳಿ ಹಳ್ಳಿಗೂ ಕೂಡ ಹಸನ್ಮುಖಿ ಇರುವಂತಹ ಮಾನ್ಯ ಸದಾನಂದ ಗೌಡರ ಫೋಟೋ ಇದೆ. ನಿಮಗೆ ಯಡಿಯೂರಪ್ಪನವರು ಅಧಿಕಾರದಿಂದ ಇಳಿದರೂ ಭಯ ಇದೆ. ಅದರಿಂದ ಅವರೇ ನಿಮಗೆ ಕಾಣುತ್ತಾರೆ.

(ಗೊಂದಲ)

ಅಧ್ಯಕ್ಷರು :– ಇದನ್ನು ಮುಕ್ತಾಯ ಮಾಡೋಣ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :– ಭಯ ಇರುವುದು ನಿಮಗೆ, ನಮಗೆ ಯಾವ ಭಯನೂ ಇಲ್ಲ. ನಿನ್ನೆಯೆಲ್ಲಾ ಬಳ್ಳಾರಿಯಲ್ಲಿ ನೋಡಿದ್ದೇವೆ.

ಅಧ್ಯಕ್ಷರು :– ಆ ವಿಚಾರವನ್ನು ಮುಕ್ತಾಯ ಮಾಡೋಣ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಮಗೇನೂ doubt ಇಲ್ಲ, ನಾವೇನೂ ಎಲ್ಲೂ ಹೇಳುವುದಕ್ಕೆ ಹೋಗಿಲ್ಲ. ನಮಗೆ ಏಕೆ ಅನುಮಾನ ಬಂತು ಅಂದರೆ ನಮ್ಮ ಮಾನ್ಯ ಜಯಚಂದ್ರ ಅವರು ಹೇಳಿದಂತೆ hoarding ಗಳಲ್ಲಿ ಇವರು ಮುಖ್ಯಮಂತ್ರಿಯಾದ ಒಂದು ತಿಂಗಳು, ಎರಡು ತಿಂಗಳವರೆಗೂ ಫೋಟೋ ಇತ್ತು. ಈಗಲೂ ಕೆಲವು ಕಡೆ ಇದ್ದಾವೆ. ಈಗ ತೆಗೆದಿದ್ದಾರೆ. As a matter of fact, I have written a letter to the Chief Secretary after a month. ಅವರದ್ದೇ ಫೋಟೋಗಳು ಇದ್ದವು. ಬೆಂಗಳೂರು ಸಿಟಿಯಲ್ಲಿ, ಬೇರೆ ಬೇರೆ ಕಡೆಯಲ್ಲಿ hoarding ಗಳಲ್ಲಿ ಅವರ ಫೋಟೋ ಇತ್ತು. ನಾನು ಆಮೇಲೆ ಮಾನ್ಯ Chief Secretary ಅವರಿಗೆ ಒಂದು ಪತ್ರವನ್ನು ಬರೆದೆ. ಈ ರಾಜ್ಯಕ್ಕೆ ಯಾರ್ರೀ ಮುಖ್ಯಮಂತ್ರಿಗಳು ? ಎಂದು ಪತ್ರ ಬರೆದೆ. ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಿದ್ದಾರೋ ಅಥವಾ ಸದಾನಂದಗೌಡರು ಮುಖ್ಯಮಂತ್ರಿಗಳೋ ? ಎಂದು ಕೇಳಿದೆ. ಈಗ ಇದಕ್ಕೆ ಕಾರಣ ಇತ್ತಲ್ಲ ? This is number one. Number two, ಯಡಿಯೂರಪ್ಪನವರು ನಾನೇ ವಾಪಸ್ ಬರುತ್ತೇನೆಂದು

ಹೇಳದೇ ಹೋಗಿದ್ದರೆ ನಾವೇಕೆ, ಮಾತನಾಡುತ್ತಿದ್ದೆವು ? ಅವರು ಹೇಳಿದ್ದಾರೋ ಇಲ್ಲವೋ ? ಈಗ ನೀವು ಹೇಳಿದ್ದೀರಿ. ಒಂದೂವರೆ ವರ್ಷ ನಾನೇ ಮುಖ್ಯಮಂತ್ರಿಯಾಗಿ ಇರುತ್ತೇನೆಂದು ಹೇಳಿದ್ದೀರಿ. ದಯಮಾಡಿ ಇರಿ. ಅವರು ಮತ್ತೆ ಬರುವುದಕ್ಕೆ ಬಿಡಬೇಡಿ. ಹೇಗಾದರೂ ಮಾಡಿ ಆರು ತಿಂಗಳಿಗೆ ಬರುತ್ತೇನೆಂದು ಹೇಳುತ್ತಾರಲ್ಲ, ದಯಮಾಡಿ ಬರುವುದಕ್ಕೆ ಬಿಡಬೇಡಿ ಅಷ್ಟೇನೆ, ನೀವೇ ಇರಿ, we have no objection.

ಶ್ರೀ ಬಸವರಾಜ ಬೊಮ್ಮಾಯಿ :– ಅವರೆಲ್ಲಿ ಬಂದು ಬಿಡುತ್ತಾರೋ ಎಂದು ನಿಮಗೆ ಭಯ ಇದೆ.

ಶ್ರೀ ಸಿದ್ದರಾಮಯ್ಯ :– ನಮಗೆ ಏಕೆ ಭಯ ? See we are not afraid of anybody.

ಶ್ರೀ ಬಸವರಾಜ ಬೊಮ್ಮಾಯಿ :– ಮತ್ತೇಕೆ ಆ subject ತರುತ್ತಿದ್ದೀರಿ ?

ಅಧ್ಯಕ್ಷರು :– ಈ ವಿಷಯವನ್ನು close ಮಾಡೋಣ.

ಶ್ರೀ ಬಸವರಾಜ ಬೊಮ್ಮಾಯಿ :– ರಾಜ್ಯಪಾಲರಿಂದ ಪ್ರಮಾಣ ವಚನ ತೆಗೆದುಕೊಂಡು 4 ತಿಂಗಳುಗಳು ಆಡಳಿತ ಮಾಡಿದ ಮೇಲೂ ಕೂಡ ನಿಮಗೆ ಅದೇ ಭಯ ಇದೆಯಲ್ಲ ?

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಾನು ಇವತ್ತು ರೂಲ್ 60 ರಲ್ಲಿ ....

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :– ಮುಂದಿನ ಚುನಾವಣೆಯಲ್ಲಿ ನೀವೆಲ್ಲಾ ಧೂಳೀಪಟ ಆಗುತ್ತೀರಿ.

(ಗೊಂದಲ)

ಅಧ್ಯಕ್ಷರು :– ಮಾನ್ಯ ರೇಣುಕಾಚಾರ್ಯರವರೇ, ದಯವಿಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ನೀವು ಮಾನ್ಯ ಯಡಿಯೂರಪ್ಪನವರ ಪರವಾಗಿ ಜಾಸ್ತಿ ವಕಾಲತ್ತು ಹಾಕಿ ಹಾಕಿ, ಪಾಪ ! ಅವರು ಹೊರಟು ಹೋದರು.

(ಗೊಂದಲ)

ಅಧ್ಯಕ್ಷರು :– ಮಾನ್ಯ ರೇಣುಕಾಚಾರ್ಯರವರೇ, ದಯವಿಟ್ಟು ನೀವು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ದಯವಿಟ್ಟು ತಮ್ಮ ವಿಚಾರ ಪ್ರಸ್ತಾಪಿಸಿ.

(ಗೊಂದಲ)

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ರಾಜ್ಯದಲ್ಲಿನ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸರ್ಕಾರ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳದಿರುವುದರಿಂದ ರೈತರು ಮತ್ತು ಜನ–ಜಾನುವಾರುಗಳು ತೊಂದರೆ ಅನುಭವಿಸುತ್ತಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಾನು ರೂಲ್ 60ರ ಅಡಿಯಲ್ಲಿ ನಿಲುವಳಿ ಸೂಚನೆಯೊಂದನ್ನು ಕೊಟ್ಟಿದ್ದೇನೆ. ಅತ್ಯಂತ ತುರ್ತಾದ ಮತ್ತು ಸಾರ್ವಜನಿಕ ಮಹತ್ವವುಳ್ಳ ವಿಚಾರವನ್ನು ಈ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲಿಚ್ಛಿಸಿದ್ದೇನೆ. ಇವತ್ತು ಸರ್ಕಾರವೇ ನಾಲ್ಕು ಕಂತುಗಳಲ್ಲಿ ರಾಜ್ಯದ ಬರಗಾಲ ಪೀಡಿತ ತಾಲ್ಲೂಕುಗಳನ್ನು ಘೋಷಣೆ ಮಾಡಿದೆ. ಒಂದು ಸಾರಿ 70 ತಾಲ್ಲೂಕುಗಳನ್ನು, ಇನ್ನೊಂದು ಸಾರಿ 14 ತಾಲ್ಲೂಕುಗಳನ್ನು, ಮತ್ತೊಂದು ಸಾರಿ 9 ತಾಲ್ಲೂಕುಗಳನ್ನು ಹಾಗೂ ಇನ್ನೊಮ್ಮೆ 6 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ದಿನಾಂಕ 4/10 ರಿಂದ ದಿನಾಂಕ 8/11ರವರೆಗಿನ ಅವಧಿಯಲ್ಲಿ ಸರ್ಕಾರ ಒಟ್ಟು ನಾಲ್ಕು ಕಂತುಗಳಲ್ಲಿ ಬರಗಾಲ ಪೀಡಿತ ತಾಲ್ಲೂಕುಗಳನ್ನು ಘೋಷಣೆ ಮಾಡಿದೆ. ಸರ್ಕಾರ ಘೋಷಿಸಿರುವ ಪ್ರಕಾರವೇ ರಾಜ್ಯದ 176 ತಾಲ್ಲೂಕುಗಳಲ್ಲಿ 99 ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಇನ್ನೂ ಕೆಲವೊಂದು ತಾಲ್ಲೂಕುಗಳಲ್ಲಿ ಬರಗಾಲವಿದ್ದರೂ ಸಹ, ಅವುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿಲ್ಲ ಎಂಬ complaints, ಆ ಕಡೆ ಮತ್ತು ಈ ಕಡೆ, ಎರಡೂ ಕಡೆಯ ಶಾಸಕರುಗಳಿಂದ ಬರುತ್ತಿವೆ. ಅದು ಏನೇ ಇರಲಿ, ಇವತ್ತು ರಾಜ್ಯದ 176 ತಾಲ್ಲೂಕುಗಳಲ್ಲಿ, more than 60% of the State is under drought. ರಾಜ್ಯದ ಇಷ್ಟೂ ತಾಲ್ಲೂಕುಗಳಲ್ಲಿ ಇವತ್ತು ಬರಗಾಲ ಪರಿಸ್ಥಿತಿಯಿದೆ.